# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 22 |
| ಸದಸ್ಯರ ಹೆಸರು | : | ಶ್ರೀ.ಯು.ಬಿ.ವೆಂಕಟೇಶ್ |
| ಉತ್ತರಿಸಬೇಕಾದ ದಿನಾಂಕ | : | 22-09-2020 |
| ಉತ್ತರಿಸಬೇಕಾದ ಸಚಿವರು | : | ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು. |

| ಕ್ರಮ ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಕರ್ನಾಟಕ ಆರ್ಟಿಕಲ್ಚರ್ ಫೆಡರೇಷನ್ ಎನ್ನುವ ಸಂಸ್ಥೆ ಅಸ್ತಿತ್ವದಲ್ಲಿದೆಯೇ; ಇದ್ದಲ್ಲಿ ಇದರ ವ್ಯಾಪ್ತಿ ಏನು: | ರಾಜ್ಯದಲ್ಲಿ ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕೆ ಮಾರಾಟ ಮಹಾಮಂಡಳಿ ನಿಯಮಿತ, ಸಂಸ್ಥೆಯು ಅಸ್ತಿತ್ವದಲ್ಲಿದೆ. ಇದರ ಕಾರ್ಯವ್ಯಾಪ್ತಿಯು ಕರ್ನಾಟಕ ರಾಜ್ಯಾದ್ಯಂತ ವಿಸ್ತರಿಸಿದೆ. |
| ಆ. | ಹಾಗಿದ್ದಲ್ಲಿ, ಈ ಸಂಸ್ಥೆ ಎಂದಿನಿಂದ ಕಾರ್ಯನಿರ್ವಹಿಸುತ್ತಿದೆ; ಈ ಸಂಸ್ಥೆಯ ಸ್ಥಾಪನೆಯ ಉದ್ದೇಶಗಳೇನು; ಪ್ರಸ್ತುತ ಇದರ ಕಾರ್ಯ ಚಟುವಟಿಕೆಗಳೇನು? | ಈ ಸಂಸ್ಥೆಯು ದಿನಾಂಕ:25.10.1996 ರಂದು ನೋಂದಣಿಯಾಗಿದ್ದು, ಅಂದಿನಿಂದ ಕಾರ್ಯನಿರ್ವಹಿಸುತ್ತಿದೆ.<br><br>**<u>ಈ ಸಂಸ್ಥೆಯು ಕೆಳಗಿನ ಉದ್ದೇಶಗಳಿಗಾಗಿ ಸ್ಥಾಪಿಸಲ್ಪಟ್ಟಿದೆ :-</u>**<br><br>1. ತೋಟಗಾರಿಕಾ ಬೆಳೆಗಳ ಅಭಿವೃದ್ಧಿಗೆ ಉತ್ತೇಜನ ಮತ್ತು ಪ್ರೋತ್ಸಾಹ ನೀಡುವುದು.<br><br>2. ತೋಟಗಾರಿಕಾ ಉತ್ಪನ್ನಗಳ ಮಾರಾಟಕ್ಕೆ ವ್ಯವಸ್ಥೆ ಮಾಡುವುದು.<br><br>3. ತೋಟಗಾರಿಕಾ ಉತ್ಪನ್ನಗಳನ್ನು ಕೊಳ್ಳುವುದು ಮತ್ತು ಮಾರಾಟ ಮಾಡುವುದು. (ನಗದು ಮತ್ತು ಸಾಲವಾಗಿ).<br><br>4. ಮಾರಾಟ ನೀತಿ ಹಾಗೂ ಕ್ರಿಯಾ ಯೋಜನೆ ರೂಪಿಸುವುದು. ಬೆಲೆಗಳು, ಗುಣಮಟ್ಟದ ಮಾನದಂಡ ಮತ್ತು ಕಚ್ಚಾ ವಸ್ತುಗಳ ಹಾಗೂ ಸಾಮಾನುಗಳನ್ನು ಕಟ್ಟುವ ಪ್ಯಾಕಿಂಗ್ ಸಾಮಗ್ರಿಗಳ ಸಂಗ್ರಹಣೆ.<br><br>5. ಕರ, ವಂತಿಗೆ ರೂಪದಲ್ಲಿ ಕ್ರೋಡಿಕರಿಸುವುದು. ಮಾರುಕಟ್ಟೆಗೆ ಅತೀ ಹೆಚ್ಚು ಹಣ್ಣು ಮತ್ತು ತರಕಾರಿ ಬಂದಾಗ ಅದರ ನಿರ್ವಹಣೆ. (Glut Marketing).<br><br>6. ವ್ಯಾಪಾರ ವ್ಯವಹಾರಗಳಿಗೆ ಹಣಕಾಸು ಸಂಗ್ರಹಣೆ ಅಥವಾ ಸದಸ್ಯ 'ಜಿಲ್ಲಾ ತೋಟಗಾರಿಕೆ ಬೆಳೆಗಾರರ ಉತ್ಪನ್ನಗಳ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ ಗಳಿಗೆ ಹಣಕಾಸು ಸಹಾಯ ನೀಡುವುದು.<br><br>7. ಶಾಖೆಗಳನ್ನು ತೆರೆಯುವುದು, ಶೈತ್ಯಾಗಾರವುಳ್ಳ ಕೇಂದ್ರ ಉಗ್ರಾಣ ಸಂಗ್ರಹಣ ಮತ್ತು ಗ್ರೇಡಿಂಗ್ ಕೇಂದ್ರಗಳು, ತೋಟಗಾರಿಕಾ ಉತ್ಪಾದನೆಗಳ (ತಾಜಾ ಮತ್ತು ಸಂಸ್ಕರಿಸಿದ) ಸಂಗ್ರಹಣ ಮತ್ತು ಮಾರಾಟದ ಬಗೆಗೆ ಚಿಲ್ಲರೆ ಮಾರಾಟ ಮಳಿಗೆಗಳನ್ನು ಸ್ಥಾಪಿಸುವುದು.<br><br>8. ಆಡಳಿತ ಮಂಡಳಿಯ ಅನುಮತಿ ಪಡೆದು |

ಹೊರ ರಾಜ್ಯಗಳಲ್ಲಿ ಮಾರಾಟ ಮಳಿಗೆಗಳು ಮತ್ತು ಗುತ್ತಿಗೆ ಆಧಾರದ ಮೇಲೆ ಒಡಂಬಡಿಕೆ ಹಾಗೂ ಒಪ್ಪಂದ ಮಾಡಿಕೊಂಡು ವ್ಯಾಪಾರ ಮಾಡುವುದು.

9. ಶೀತಲೀಕರಣ ಪೂರ್ವಭಾವಿ ಘಟಕಗಳು, ಶೈತ್ಯಾಗಾರಗಳು, ಬೆಳೆ ಕೊಯ್ಲು ನಂತರದ ಮೂಲಭೂತ ಸೌಕರ್ಯಗಳು ತನ್ನ ಸ್ವಂತ ಉಪಯೋಗಕ್ಕೆ ಮತ್ತು ಸದಸ್ಯ ಸಂಘಗಳ ಮತ್ತಿತರ ಬೆಳೆಗಾರರ ಉತ್ಪಾದನೆಗಳ ಶೇಖರಣೆ ಮತ್ತು ಮಾರಾಟದ ಬಗೆಗೆ ಅನುಕೂಲಕರವಾದ ಉಗ್ರಾಣಗಳ ಕಟ್ಟುವಿಕೆ. ತಯಾರಿಕಾ ಘಟಕಗಳ ಸ್ಥಾಪನೆ ಮತ್ತು ಸಂಸ್ಕರಣ ಘಟಕಗಳ ಸ್ಥಾಪನೆ.

10. ಮಹಾಮಂಡಳದ ವ್ಯಾಪಾರಕ್ಕೆ ಅನುಕೂಲ ವಾಗುವಂತೆ ಜಮೀನಿನ ಅಥವಾ ಕಟ್ಟಡಗಳ, ಉಪಕರಣಗಳ ಒಡೆತನ ಹೊಂದುವುದು ಮತ್ತು ಅವುಗಳನ್ನು ಬಾಡಿಗೆಗೆ ಅಥವಾ ಭೋಗ್ಯಕ್ಕೆ ನೀಡುವುದು ಹಾಗೂ ತೆಗೆದುಕೊಳ್ಳುವುದು.

11. ತೋಟಗಾರಿಕೆಗೆ ಅನುಕೂಲಕರವಾದ ರೀತಿಯಲ್ಲಿ ತೋಟಗಾರಿಕೆ ಉತ್ಪನ್ನಗಳ, ಅಂತರ ರಾಜ್ಯ ವಾಣಿಜ್ಯ ಆಮದು ಅಥವಾ ರಫ್ತು, ಮಹಾಮಂಡಳ ತನ್ನ ಪರವಾಗಿಯಾಗಲಿ ಅಥವಾ ತನ್ನ ಸದಸ್ಯ ಸಂಘಗಳ ಪರವಾಗಿಯಾಗಲಿ, ತೋಟಗಾರಿಕಾ ಮತ್ತು ಸಂಬಂಧಪಟ್ಟ ಪದಾರ್ಥಗಳ ಮಾರಾಟ ವ್ಯವಸ್ಥೆ ಮಾಡುವುದು.

12. ಸದಸ್ಯರಿಗೆ ತೋಟಗಾರಿಕಾ ಸಾಮಗ್ರಿಗಳು ಹಾಗೂ ಇತರೆ ಪರಿಕರಗಳ ಸರಬರಾಜಿನ ವ್ಯವಸ್ಥೆ ಮಾಡುವುದು.

13. ತೋಟಗಾರಿಕೆ ಉತ್ಪನ್ನ ಮತ್ತು ಸಹಕಾರಿ ಮಾರಾಟದ ಬಗೆಗೆ ಪ್ರಚಾರ ಮತ್ತು ಪ್ರಕಟಣೆ, ಪ್ರಕಟಿತ ಸಾಹಿತ್ಯದ ಸರಬರಾಜು, ಪ್ರದರ್ಶನಗಳ ಏರ್ಪಾಟು, ಸಮ್ಮೇಳನಗಳು, ವಿಚಾರಗೋಷ್ಠಿ, ಕಾರ್ಯಾಗಾರಗಳು ಮತ್ತು ಅಧ್ಯಯನ ಪ್ರವಾಸಗಳನ್ನು ಕೈಗೊಳ್ಳುವುದು.

14. ಸರ್ಕಾರದ ಮತ್ತು ಯಾವುದೇ ಕಾಯಿದೆಯಡಿಯಲ್ಲಿ ನೋಂದಾಯಿತ ಸಾರ್ವಜನಿಕ (ಬಾಡಿಗಳ) (Bodies) ಹಾಗೂ ನಿಗಮಗಳ ಏಜೆಂಟ್‌ರಾಗಿ ವರ್ತಿಸುವಿಕೆ, ಸರ್ಕಾರಿ, ಸಹಕಾರಿ, ಸಾರ್ವಜನಿಕ ವಲಯದ ಸಂಸ್ಥೆಗಳಿಗೆ ಮತ್ತು ಖಾಸಗೀಯೇತರ ಸಂಘಟನೆಗಳಿಗೆ, ಅವುಗಳನ್ನು ನಾಮಾಂಕಿತ ಸದಸ್ಯರನ್ನಾಗಿ ಸೇರಿಸಿಕೊಂಡು ನಂತರ ತಾಜಾ ಮತ್ತು ಸಂಸ್ಕರಣಗೊಂಡ ತೋಟಗಾರಿಕಾ ಉತ್ಪನ್ನಗಳನ್ನು ನಗದು ಅಥವಾ ಸಾಲದ ಆಧಾರದ ಮೇಲೆ ಒದಗಿಸುವುದು.

15. ಚಿಲ್ಲರೆ ವ್ಯಾಪಾರಿಗಳೊಡನೆ ಒಪ್ಪಂದಗಳನ್ನು ಅನುಮೋದಿತವಾದ ಒಡಂಬಡಿಕೆಯೊಂದಿಗೆ (MOU) ಮಾರಾಟದ ಹಕ್ಕನ್ನು (ಫ್ರಾಂಚೈಸ್) ನೀಡುವುದು.

16. ಅಭಿವೃದ್ಧಿ ಹೊಂದಿದ ದೇಶಗಳಿಂದ, ಮತ್ತು ಸಂಶೋಧನಾ ಕೇಂದ್ರಗಳಿಂದ, ತೋಟಗಾರಿಕೆಯಲ್ಲಿ ಅತ್ಯಾಧುನಿಕ ಮತ್ತು ಸುಧಾರಿತ ತಂತ್ರಜ್ಞಾನವನ್ನು

| | | |
|---|---|---|
| | | ಬೆಳೆಗಾರರಿಗೆ ವರ್ಗಾವಣೆ ಮಾಡಲು ಕ್ರಮಕೈಗೊಳ್ಳುವುದು.<br><br>17. ವ್ಯಾಪಾರಕ್ಕೆ ಸಂಬಂಧಿಸಿದಂತೆ ಸಾಲ ಪಡೆಯಲು, ಭದ್ರತೆಯಾಗಿ ಅಥವಾ ಭದ್ರತೆಯ ಪಾಲಾಗಿ ಯಾವುದೇ ಲಭ್ಯವಾದ ಜಮೀನು, ಕಟ್ಟಡ ಅಥವಾ ಬೇರಾವುದೇ ಸ್ಥಿರ ಸ್ವತ್ತುಗಳನ್ನು ಸಹಕಾರ ಸಂಸ್ಥೆಗಳಿಗೆ ಬಾಡಿಗೆ ಅಥವಾ ಭೋಗ್ಯಕ್ಕೆ ನೀಡುವುದು.<br><br>18. ಪ್ರಮುಖ ಮಾರುಕಟ್ಟೆಗಳಲ್ಲಿನ ಬೆಲೆಗಳ ಸಾಮಾನ್ಯ ಪ್ರವೃತ್ತಿಯ ಬಗೆಗೆ ವ್ಯಾಪಾರಿ ಮಾಹಿತಿಯನ್ನು ಪಡೆದುಕೊಂಡು ಅದನ್ನು ತನ್ನ ಸದಸ್ಯರಲ್ಲಿ ಪ್ರಸರಣೆ ಮಾಡುವುದು. ರಾಜ್ಯದಲ್ಲಿ ಸಹಕಾರಿ ಚಳುವಳಿಗೆ ಉತ್ತೇಜನ, ವಿಶೇಷವಾಗಿ ತೋಟಗಾರಿಕಾ ಬೆಳೆ ಮತ್ತು ಅವುಗಳ ಮಾರಾಟ ಅಭಿವೃದ್ಧಿಗೆ ಒತ್ತುಕೊಡುವುದು.<br><br>**<u>ಸಂಸ್ಥೆಯು ಈ ಕೆಳಗಿನ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುತ್ತಿದೆ.</u>**<br><br>1. ಜಿಲ್ಲಾ ಹಾಪ್‌ಕಾಮ್ಸ್‌ಗಳಲ್ಲಿ ಹೊಸದಾಗಿ ಮಾರಾಟ ಮಳಿಗೆಗಳು, ಆಧುನಿಕ ಮಾರಾಟ ಮಳಿಗೆಗಳು, ಸಂಸ್ಕರಣಾ ಘಟಕಗಳು ಹಾಗೂ ಹಾಲಿ ಇರುವ ಮಳಿಗೆಗಳ ನವೀಕರಣಕ್ಕಾಗಿ ಸಂಸ್ಥೆಯವತಿಯಿಂದ ಅನುದಾನವನ್ನು ವಿತರಿಸಲಾಗುತ್ತಿದೆ.<br><br>2. ಜಿಲ್ಲಾ ಹಾಪ್‌ಕಾಮ್ಸ್‌ಗಳಲ್ಲಿ ಮೊಬೈಲ್ ವಾಹನದ ಮೂಲಕ ಮಾರಾಟ ಮಾಡುವ ವ್ಯವಸ್ಥೆ ಕಲ್ಪಿಸಲು ಐ.ಐ.ಹೆಚ್.ಆರ್., ಬೆಂಗಳೂರು ವತಿಯಿಂದ ವಾಹನದ ವಿನ್ಯಾಸಗೊಳಿಸಿ ಪ್ರಾಯೋಗಿಕವಾಗಿ ಜಿಲ್ಲಾ ಹಾಪ್‌ಕಾಮ್ಸ್, ಮೈಸೂರು ರವರಿಂದ ನಡೆಸಲಾಗುತ್ತಿದೆ.<br><br>3. ಜಿಲ್ಲಾ ಹಾಪ್‌ಕಾಮ್ಸ್, ಮೈಸೂರು ಮತ್ತು ಮಂಗಳೂರಿನ ಗಣಕೀಕರಣ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.<br><br>4. ರೈತ ಸದಸ್ಯರು ತಮ್ಮ ತೋಟದಿಂದ ಹಣ್ಣು ಮತ್ತು ತರಕಾರಿಗಳ ಸಾಗಾಣೆ ಮಾಡಲು ಅನುಕೂಲವಾಗುವಂತೆ ಪ್ಲಾಸ್ಟಿಕ್ ಕ್ರೇಟ್‌ಸ್‌ಗಳನ್ನು ಶೇಕಡ 50% ರ ಸಹಾಯಧನದಂತೆ ಜಿಲ್ಲಾ ಹಾಪ್‌ಕಾಮ್ಸ್‌ಗಳ ಮೂಲಕ ವಿತರಣೆ ಮಾಡಲಾಗುತ್ತಿದೆ.<br><br>5. ಹಣ್ಣು ಮತ್ತು ತರಕಾರಿಗಳ ಬೇಸಾಯ, ಕೊಯ್ಲು, ಕೊಯ್ಲೋತ್ತರ ನಿರ್ವಹಣೆ ಹಾಗೂ ಮಾರಾಟದ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಹಾಗೂ ಹಣ್ಣಿನ ಮೇಳಗಳನ್ನು ಆಯೋಜಿಸಲಾಗುತ್ತಿದೆ.<br><br>6. ಕೆ.ಟಿ.ಪಿ.ಪಿ. ಕಾಯಿದೆಯ 4 (ಜಿ) ಅಡಿಯಲ್ಲಿ ವಿನಾಯಿತಿ ಪಡೆಯಲಾಗಿದ್ದು ವಿವಿಧ ವಸತಿ ಶಾಲೆಗಳು, ಸರ್ಕಾರಿ ಶಾಲೆಗಳು, ಆಸ್ಪತ್ರೆಗಳು ಹಾಗೂ ಕಾರ್ಖಾನೆಗಳಿಗೆ ಹಣ್ಣು ಮತ್ತು ತರಕಾರಿಗಳನ್ನು ಜಿಲ್ಲಾ ಹಾಪ್‌ಕಾಮ್ಸ್‌ಗಳ ಮುಖಾಂತರ ಸರಬರಾಜು ಮಾಡಲಾಗುತ್ತಿದೆ. |

| | | |
|---|---|---|
| | | 7. ಜಿಲ್ಲಾ ಹಾಪ್‌ಕಾಮ್ಸ್ ವತಿಯಿಂದ ಹಣ್ಣು ಮತ್ತು ತರಕಾರಿಗಳ ಮಾರಾಟಕ್ಕೆ ಸಲಹೆ / ಮಾರ್ಗದರ್ಶನವನ್ನು ನೀಡಲಾಗುತ್ತಿದೆ.<br><br>8. ಕೋವಿಡ್ ಲಾಕ್ ಡೌನ್ ಅವಧಿಯಲ್ಲಿ ಮೊಬೈಲ್ ವಾಹನಗಳ ಮೂಲಕ ಹಣ್ಣು - ತರಕಾರಿಗಳನ್ನು ಮಾರಾಟ ಮಾಡಲು ಸಹಾಯಧನವನ್ನು ಜಿಲ್ಲಾ ಹಾಪ್ ಕಾಮ್ಸ್ ಗಳಿಗೆ ನೀಡಲಾಗಿದೆ. |

ನಂ: HORTI/341/HGM/2020-admn-Horti-Sec

(ನಾರಾಯಣ ಗೌಡ)

ತೋಟಗಾರಿಕೆ, ಪೌರಾಡಳಿತ

ಮತ್ತು ರೇಷ್ಮೆ ಸಚಿವರು